**ಕರ್ನಾಟಕ ಸರ್ಕಾರ**
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

---

**ಸಂಖ್ಯೆ : ವಾಇ : ಜಂ ನಿ : ಸುಮಪ : 2021–22** **ದಿನಾಂಕ : 30–09–2021**

# ಮಾಧ್ಯಮ ಆಹ್ವಾನ
# Media Invitation

## 1.ಕೃಷಿ ವಿದ್ಯಾಲಯದ ಐವತ್ತಾರನೆಯ ಸಂಸ್ಥಾಪನಾ ದಿನಾಚರಣೆ:

**ಉದ್ಘಾಟನೆ:**
**ಶೋಭಾ ಕರಂದ್ಲಾಜೆ**
**ಸನ್ಮಾನ್ಯ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವರು, ಭಾರತ ಸರ್ಕಾರ.**

**ಮುಖ್ಯ ಅತಿಥಿಗಳು:**
**ಮಹಾಬಲೇಶ್ವರ ಎಂ.ಎಸ್**
**ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ಣಾಟಕ ಬ್ಯಾಂಕ್, ಮಂಗಳೂರು.**

**ಅಧ್ಯಕ್ಷತೆ:**
**ಡಾ. ಎಸ್. ರಾಜೇಂದ್ರ ಪ್ರಸಾದ್**
**ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.**

**ದಿನಾಂಕ: 01–10–2021 ಶುಕ್ರವಾರ, ಸಮಯ: ಬೆಳಿಗ್ಗೆ 10.30 ಗಂಟೆಗೆ**

**ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ, ಬೆಂಗಳೂರು.**

## 2. ವಿಶ್ವ ಹಿರಿಯ ನಾಗರಿಕರ ದಿನಾಚರಣೆ–2021 ಮತ್ತು ರಾಷ್ಟ್ರೀಯ ಹಿರಿಯ ನಾಗರಿಕರ ಸಹಾಯವಾಣಿ ಲೋಕಾರ್ಪಣೆ:

**ಉದ್ಘಾಟನೆ:**
**ಬಸವರಾಜ ಎಸ್ ಬೊಮ್ಮಾಯಿ**
**ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.**

**ವಿಶೇಷ ಆಹ್ವಾನಿತರು:**
**ಶ್ರೀಮತಿ ನಿರ್ಮಲಾ ಸೀತಾರಾಮನ್,**
**ಮಾನ್ಯ ಕೇಂದ್ರ ಹಣಕಾಸು ಮತ್ತು ಕಾರ್ಪ್ರೇರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ**

**ಎ. ನಾರಾಯಣಸ್ವಾಮಿ,**
**ಮಾನ್ಯ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ರಾಜ್ಯ ಸಚಿವರು, ಭಾರತ ಸರ್ಕಾರ**

**ಪ್ರಶಸ್ತಿ ಪ್ರದಾನ:**
**ಗೋವಿಂದ ಎಂ. ಕಾರಜೋಳ**
**ಮಾನ್ಯ ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರ್ಕಾರ.**

**ಹಾಲಪ್ಪ ಬಸಪ್ಪ ಆಚಾರ್**
**ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,**
**ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು, ಕರ್ನಾಟಕ ಸರ್ಕಾರ.**

**ಅಧ್ಯಕ್ಷತೆ:**
**ಡಾ. ಉದಯ್ ಬಿ. ಗರುಡಾಚಾರ್**
**ಮಾನ್ಯ ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ.**

**ದಿನಾಂಕ: 01–10–2021 ಶುಕ್ರವಾರ, ಸಮಯ: ಮಧ್ಯಾಹ್ನ 1.00 ಗಂಟೆಗೆ**

**ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಂಗಳೂರು.**

# ಪತ್ರಿಕಾ ಪ್ರಕಟಣೆ

**PRESS RELEASE**

## <u>ಹಲವಾರು ಕ್ಷೇತ್ರಗಳಲ್ಲಿ ಗಣನೀಯ ಸೇವೆಗೈದ ಹಿರಿಯ ನಾಗರೀಕರಿಗೆ ಸನ್ಮಾನ</u>

– ಸಚಿವ ಹಾಲಪ್ಪ ಬಸಪ್ಪ ಆಚಾರ್

ಬೆಂಗಳುರೂರು, ಸೆಪ್ಟೆಂಬರ್ 30, (ಕರ್ನಾಟಕ ವಾರ್ತೆ) :

ಪ್ರತಿ ವರ್ಷದಂತೆ ಈ ವರ್ಷವೂ ಸಹ ವಿಶ್ವ ಹಿರಿಯ ನಾಗರೀಕರ ದಿನಾಚರಣೆಯಂದು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆಗೈದಿರುವ ಹಿರಿಯ ನಾಗರೀಕರನ್ನು ಗುರುತಿಸಿ ಗೌರವಿಸಲಾಗುವುದು ಎಂದು ಸಚಿವ ಹಾಲಪ್ಪ ಬಸಪ್ಪ ಆಚಾರ್ ಅವರು ತಿಳಿಸಿದರು.

ಇಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಾಧ್ಯಮದವರನ್ನು ಉದ್ದೇಶಿಸಿ ಮಾತನಾಡಿದ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು, ಈ ವರ್ಷ "ಎಲ್ಲಾ ವಯೋಮಾನದವರಿಗೆ ಡಿಜಿಟಲ್ ಸಮಾನತೆ" ಎಂಬ ಘೋಷ ವಾಕ್ಯದೊಂದಿಗೆ ಅಕ್ಟೋಬರ್ 1, 2021ರಂದು ಮಧ್ಯಾಹ್ನ 1.00 ಗಂಟೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಈ ಸಮಾರಂಭದಲ್ಲಿ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆಗೈದಿರುವ ಹಿರಿಯ ನಾಕರೀಕರಿಗೆ ಮುಖ್ಯಮಂತ್ರಿಗಳು ಸನ್ಮಾನ ಮಾಡಲಿರುವರು ಎಂದು ತಿಳಿಸಿದರು.

ವಯಸ್ಸಾಗುವುದು ನೈಸರ್ಗಿಕ ಕ್ರಿಯೆ, ವೃದ್ಧರು ಎನ್ನುವುದು ವಯಸ್ಸಿನ ಆಧಾರದ ಮೇಲೆ ಜನರನ್ನು ವರ್ಗೀಕರಿಸಲು ಇರುವ ಗುರುತಿನ ಪಟ್ಟಿ ಅಷ್ಟೇ. ಅರವತ್ತು ತಲುಪಿದಾಕ್ಷಣ ಜನರ ಶಕ್ತಿ ಸಾಮರ್ಥ್ಯಗಳು ಮುರುಟಿ ಹೋಗುವುದಿಲ್ಲ ಅವರ ಜೀವನಾನುಭವ, ಪರಿಣಿತಿ ಮತ್ತು ವಿವೇಕ ಸಮಾಜಕ್ಕೆ ಅತ್ಯಗತ್ಯ, ಹಿರಿಯರು ಎಂದು ಲಕ್ಷಾಂತರ ಜನರನ್ನು ಮೂಲೆಗುಂಪು ಮಾಡುವುದು ವಿವೇಕವಲ್ಲ ಎಂದು ತಿಳಿಸಿದರು.

ಅರವತ್ತು ವಯಸ್ಸು ಮೀರಿದ ಮೇಲೂ ಹಿರಿಯ ನಾಗರೀಕರು ಸಕ್ರಿಯರಾಗಿ ಕಾರ್ಯನಿರ್ವಹಿಸುತ್ತಾರೆ. ಇಂತಹ ಹಿರಿಯ ನಾಗರಿಕರಿಗೆ ಅನುಕೂಲಕರ ವಾತಾವರಣ ನಿರ್ಮಿಸಿದಲ್ಲಿ ಅವರು ತಮ್ಮ ಸಮುದಾಯ, ಸಮಾಜ ಮತ್ತು ಅಭಿವೃದ್ಧಿಯಲ್ಲಿ ಭಾಗೀದಾರರಾಗಬಲ್ಲರು. ಹಿರಿಯ ನಾಗರೀಕರು ಸಹ ಸಮಾಜದ ಅಭಿವೃದ್ಧಿಗೆ ಬಳಸಿಕೊಳ್ಳಬಹುದಾದ ಸಂಪನ್ಮೂಲ ಎಂದು ಸಚಿವರು ತಿಳಿಸಿದರು.

2011ನೇ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ 57.91 ಲಕ್ಷ ಹಿರಿಯ ನಾಗರಿಕರು ಇದ್ದಾರೆಂದು ಅಂದಾಜಿಸಲಾಗಿದೆ. ಕುಟುಂಬದಲ್ಲಿರುವ ಹಿರಿಯ ನಾಗರಿಕರು ಮಕ್ಕಳನ್ನು ಸನ್ಮಾರ್ಗದಲ್ಲಿ ನಡೆಸಿ, ಅವರು ಶಿಸ್ತು-ಸಂಯಮ ಹಾಗೂ ಸಾಮಾಜಿಕ ಮೌಲ್ಯಗಳನ್ನು ರೂಢಿಸಿಕೊಂಡು ಉತ್ತಮ ನಾಗರಿಕರಾಗಿ ಮತ್ತು ಶ್ರಮಜೀವಿಗಳಾಗಿ ಬಾಳಲು ತನ್ಮೂಲಕ ಸಮಾಜಕ್ಕೆ ಹಾಗೂ ಕುಟುಂಬಕ್ಕೆ ಗೌರವವನ್ನು ತಂದುಕೊಡುವ ಕೆಲಸಗಳನ್ನು ಮಾಡಲು ಕಿರಿಯರನ್ನು ಸದಾಕಾಲ ಪ್ರೇರೇಪಿಸುತ್ತಾ ಸದೃಢ ಸಮಾಜಕ್ಕೆ ಅವರದ್ದೇ ಆದ ಸಕಾರಾತ್ಮಕ ಕೊಡುಗೆಯನ್ನು ನೀಡುತ್ತಿದ್ದಾರೆ.

ಹಿರಿಯರನ್ನೂ ಅತ್ಯಂತ ಗೌರವದಿಂದ ಕಾಣುವ ಹಾಗೂ ಹಿರಿಯರು ಸೇವೆ ಮಾಡುವುದೇ ಒಂದು ಭಾಗ್ಯವೆಂದು ತಿಳಿಯುತ್ತಿದ್ದ ಅತ್ಯಂತ ಶ್ರೀಮಂತ ಸಂಸ್ಕೃತಿಯನ್ನು ಹೊಂದಿದ್ದಂತಹ ದೇಶ ಭಾರತ. ಆದರೆ ಇತ್ತೀಚಿನ ಅಗಾಧ ಸಾಮಾಜಿಕ, ತಾಂತ್ರಿಕ ಹಾಗೂ ಆರ್ಥಿಕ ಬದಲಾವಣೆಗಳಿಂದಾಗಿ ಒಂದು ಕಾಲದಲ್ಲಿ ಗೌರವಯುತವಾಗಿ ಬಾಳಿ ಬದುಕಿದ ಹಿರಿಯರು ತಮ್ಮ ಮಕ್ಕಳಿಂದ, ಮನೆಯವರಿಂದ, ಆಪ್ತ ಸಂಬಂಧಿಕರಿಂದ ಹಾಗೂ ಒಂದು ಸಮುದಾಯದಿಂದಲೇ ದೂರವಾಗುತ್ತಿರುವ ಸಂದರ್ಭ ಒದಗಿದೆ.

ನಮ್ಮ ರಾಜ್ಯ ಸರ್ಕಾರವು ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿಗಾಗಿ ಹಲವು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಅದೇರೀತಿ ಕಾನೂನು, ಸಾಹಿತ್ಯ, ಶಿಕ್ಷಣ, ಕ್ರೀಡೆ, ಕಲೆ ಹಾಗೂ ಸಮಾಜ ಸೇವೆ ಕ್ಷೇತ್ರಗಳಲ್ಲಿ ಗಣನೀಯ ಸೇವೆಗೈದ ಹಿರಿಯ ನಾಗರಿಕರನ್ನು ಮತ್ತು ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿರುವ ಒಂದು ಸಂಸ್ಥೆಯನ್ನು ಗುರುತಿಸಿ ಪ್ರತಿ ವರ್ಷ ಅಕ್ಟೋಬರ್ 01ರ ವಿಶ್ವ ಹಿರಿಯ ನಾಗರೀಕರ ದಿನಾಚರಣೆಯ ದಿನದಂದು ಅವರನ್ನು ಗೌವರವಿಸಲಾಗುತ್ತಿದೆ.

ಅದರಂತೆ ಹಿರಿಯ ನಾಗರೀಕರ ವಿವಿಧ ಕ್ಷೇತ್ರದಿಂದ ಆಯ್ಕೆಯಾಗಿರುವ ಹಾವೇರಿಯ ಶ್ರೀ ಗುರುಪಾದಪ್ಪ ಅಂಚೇರ, ಶಿಕ್ಷಣ ಕ್ಷೇತ್ರ, ಬಾಗಲಕೋಟೆಯ ಡಾ. ಕರವೀರಪ್ರಭು ಕ್ಯಾಲಕೊಂಡ, ಸಾಹಿತ್ಯ ಕ್ಷೇತ್ರ, ರಾಯಚೂರಿನ ಶ್ರೀ ಶರಣಪ್ಪ ಗೋನಾಳ, ಕಲಾ ಕ್ಷೇತ್ರ, ಉಡುಪಿಯ ಶ್ರೀ ಎಸ್. ಜನಾರ್ದನ, ಸಮಾಜ ಸೇವೆ ಕ್ಷೇತ್ರ, ಕೋಲಾರದ ಶ್ರೀ ಅಂಚೆ ಅಶ್ವತ್ಥ, ಪ್ರತಿಭೆ/ಕ್ರೀಡಾ ಕ್ಷೇತ್ರ, ಕೊಪ್ಪಳದ ಶ್ರೀ. ಬಿ. ಕಿಷನ್ ರಾವ್, ಕಾನೂನು ಕ್ಷೇತ್ರ ಹಾಗೂ ಬೀದರ್ ಜಿಲ್ಲೆಯ ಡಾ॥ ಬಿ.ಆರ್.ಅಂಬೇಡ್ಕರ್ ಕಲ್ಚರಲ್ ಅಂಡ್ ವೆಲ್ಫೇರ್ ಸೊಸೈಟಿ, ಸಂಸ್ಥೆಯನ್ನು ಗುರುತಿಸಲಾಗಿದ್ದು, ಎಲ್ಲರಿಗೂ ವಿಶ್ವ ನಾಗರೀಕರ ದಿನಾಚರಣೆಯ ದಿನದಂದು ರೂ 1.00 ಲಕ್ಷ ನಗದು ಪುರಸ್ಕಾರದೊಂದಿಗೆ ನೆನಪಿನ ಕಾಣಿಕೆ ಹಾಗೂ ಪ್ರಮಾಣ ಪತ್ರ ನೀಡಿ ಗೌರವಿಸಲಾಗುವುದು ಎಂದು ತಿಳಿಸಿದರು.

ಈ ಹಿಂದೆ ವಿಶೇಷ ಸಾಧನೆಗೈದ ಕೇವಲ ಒಬ್ಬ ಹಿರಿಯ ನಾಗರಿಕರನ್ನು ಸನ್ಮಾನಿಸಲಾಗುತ್ತಿತ್ತು. ಆದರೆ 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿನೆನಪಿಗಾಗಿ ಈ ಬಾರಿ ರಾಜ್ಯದ 4 ಕಂದಾಯ ವಿಭಾಗಗಳಲ್ಲಿ ಒಂದು ವಿಭಾಗಕ್ಕೆ ಒಬ್ಬರಂತೆ ಒಟ್ಟು 04 ವಿಶೇಷ ಸಾಧಕರನ್ನು ಸನ್ಮಾನಿಸಲು ಸಹ ತೀರ್ಮಾನಿಸಿ ಬೆಂಗಳೂರು ವಿಭಾಗದಿಂದ ಕನ್ನಡ ಗಣಕ ಪರಿಷತ್ – ವಾಗಾಕ್ಷರ ತಂತ್ರಜ್ಞಾನ ಅಭಿವೃದ್ಧಿಗೆ ಸಹಕರಿಸಿದ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ.ಎನ್.ನರಸಿಂಹಮೂರ್ತಿ, ಮೈಸೂರು ವಿಭಾಗದಿಂದ ಹಾಸನದ ನೃತ್ಯ ಹಾಗೂ ಸಂಗೀತ ಕಲಾವಿದರಾದ ಶ್ರೀಮತಿ ಉಷಾ ದಾತಾರ, ಬೆಳಗಾವಿ ವಿಭಾಗದಿಂದ ಬಾಗಲಕೋಟೆ ಜಿಲ್ಲೆ

ಜಮಖಂಡಿಯ ಪಶುಶುಶ್ರೂಷಕರಾದ ಡಾ॥ ಹನುಮಂತಪ್ಪ ಭೀಮಪ್ಪ ಗಲಗಲಿ ಹಾಗೂ ಕಲಬುರಗಿ ವಿಭಾಗದಿಂದ ಕೊಪ್ಪಳ ಜಿಲ್ಲೆಯ ತೊಗಲುಗೊಂಬೆ ಕಲಾವಿದರಾದ ಶ್ರೀಮತಿ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೇಕ್ಯಾತರ ಇವರನ್ನು ಸಹ ಸನ್ಮಾನಿಸಲಾಗುವುದು.

ಈ ಹಿಂದೆ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ರಾಜ್ಯಾದ್ಯಂತ ಹಿರಿಯ ನಾಗರಿಕರಿಗೆ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸಿ ಜಿಲ್ಲೆಯಲ್ಲಿ ವಿಜೇತರಾದವರನ್ನು ರಾಜ್ಯ ಮಟ್ಟದಲ್ಲಿ ಆಯ್ಕೆ ಮಾಡಿ ಈ ಸಮಾರಂಭದಲ್ಲಿ ಬಹುಮಾನವನ್ನು ವಿತರಿಸಲಾಗುತ್ತಿತ್ತು. ಆದರೆ ಕೋವಿಡ್-19ರ ಹಿನ್ನೆಲೆಯಲ್ಲಿ ಪ್ರಸ್ತುತ ವರ್ಷ ಈ ಕಾರ್ಯಕ್ರಮಗಳನ್ನು ಆಯಾ ಜಿಲ್ಲಾ ಮಟ್ಟದಲ್ಲಿ ನಡೆಸಿ ಬಹುಮಾನಗಳನ್ನು ಜಿಲ್ಲಾ ಮಟ್ಟದಲ್ಲಿಯೇ ವಿತರಿಸಲಾಗುತ್ತಿದೆ. ಬೆಂಗಳೂರು ನಗರ ಜಿಲ್ಲೆಯ ವಿಜೇತರಿಗೆ ಮಾತ್ರ ಈ ಸಮಾರಂಭದಲ್ಲಿ ಬಹುಮಾನಗಳನ್ನು ವಿತರಿಸಲಾಗುತ್ತಿದೆ.

ಈ ಸಮಾರಂಭವನ್ನು ಕೋವಿಡ್-19ರ ಮಾರ್ಗಸೂಚಿಗಳನ್ವಯ ಆಯೋಜಿಸಲಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಖುದ್ದಾಗಿ ಭಾಗವಹಿಸಲು ಸಾಧ್ಯವಾಗದ ಹಿರಿಯರು ಈ ಕಾರ್ಯಕ್ರಮವನ್ನು https://youtu.be/MohoAjzCoek ಲಿಂಕ್‌ನಲ್ಲಿ ನೇರ ಪ್ರಸಾರದಲ್ಲಿ ಕೂಡ ವೀಕ್ಷಿಸಬಹುದಾಗಿದೆ ಎಂದು ಸಚಿವರು ತಿಳಿಸಿದರು.

ಕೇಂದ್ರ ಸರ್ಕಾರದಿಂದ "ರಾಷ್ಟ್ರೀಯ ಹಿರಿಯ ನಾಗರಿಕರ ಸಹಾಯವಾಣಿ" ಇದೇ ದಿನ ಬೆಳಿಗ್ಗೆ ದೇಶಕ್ಕೆ ಲೋಕಾರ್ಪಣೆಗೊಂಡಿದ್ದು, ಪ್ರಸ್ತುತ ಕೇಂದ್ರ ಸರ್ಕಾರದೊಂದಿಗೆ ಸೇರಿ "ರಾಷ್ಟ್ರೀಯ ಹಿರಿಯ ನಾಗರಿಕರ ಸಹಾಯವಾಣಿ"ಯನ್ನು ರಾಜ್ಯದಲ್ಲಿ ಸಹ ಈ ದಿನ ಲೋಕಾರ್ಪಣೆ ಮಾಡಲಾಗುತ್ತಿದೆ. ಈ ಸಹಾಯವಾಣಿಯಲ್ಲಿ ಉನ್ನತ ತಾಂತ್ರಿಕತೆಯನ್ನು ಬಳಸಿಕೊಂಡು ಹಿರಿಯ ನಾಗರಿಕರಿಗೆ ಶೀಘ್ರವಾಗಿ ಸೇವೆಯನ್ನು ನೀಡುವ ಉದ್ದೇಶವನ್ನು ಹೊಂದಿದೆ. ಈ ಸಹಾಯವಾಣಿಯನ್ನು ಕೇಂದ್ರ ಸರ್ಕಾರದ ಅನುದಾನದೊಂದಿಗೆ ನೈಟಿಂಗೇಲ್ ಮೆಡಿಕಲ್ ಟ್ರಸ್ಟ್, ಬೆಂಗಳೂರು ಈ ಸಂಸ್ಥೆಯ ಮೂಲಕ ನಿರ್ವಹಿಸಲಾಗುತ್ತಿದೆ. ರಾಷ್ಟ್ರೀಯ ಹಿರಿಯ ನಾಗರಿಕರ ಸಹಾಯವಾಣಿಯ ಟೋಲ್ ಫ್ರೀ ಸಂಖ್ಯೆ: 14567 ಆಗಿದೆ ಎಂದು ಸಚಿವರು ತಿಳಿಸಿದರು.

ಈ ಸಹಾಯವಾಣಿಯಲ್ಲಿ ಹಿರಿಯ ನಾಗರಿಕರಿಗೆ "ಮನೆ ಆರೈಕೆ" ಸೇವೆಗಳ (ಹೋಮ್‌ಕೇರ್ ಸರ್ವೀಸ್) ಬಗ್ಗೆ ಆಸ್ಪತ್ರೆ ಮತ್ತು ಹಿರಿಯರ ಆರೈಕೆಯ ಸೌಲಭ್ಯಗಳ ಬಗ್ಗೆ, ವೃದ್ಧಾಶ್ರಮಗಳ ಬಗ್ಗೆ ಮತ್ತು ಕೋವಿಡ್ ಸಂಬಂಧಿತ ಮಾಹಿತಿಗಳು ಸೇರಿದಂತೆ ಇನ್ನಿತರ ಅಗತ್ಯ ಸೇವೆ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವುದು ಸಾರ್ವಜನಿಕ ಕುಂದುಕೊರತೆ, ಪಿಂಚಣಿ ಸೌಲಭ್ಯ ಹಾಗು ಸರ್ಕಾರದ ಕಾರ್ಯಕ್ರಮಗಳು ಮತ್ತು ಮಾರ್ಗಸೂಚಿಗಳ ಬಗ್ಗೆ ಮಾಹಿತಿ ನೀಡುವುದು. ಉಚಿತ ಕಾನೂನು ಮಾರ್ಗದರ್ಶನದೊಂದಿಗೆ ಪಾಲಕರ ಪೋಷಣೆ, ಸಂರಕ್ಷಣೆ ಮತ್ತು ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ 2007 ರ ಬಗ್ಗೆ ಅರಿವು ನೀಡುವುದು. ಅಗತ್ಯ ಸಲಹೆ ಮಾರ್ಗದರ್ಶನ, ಭಾವನಾತ್ಮಕ ಹಾಗೂ ನೈತಿಕ ಬೆಂಬಲ, ಸಮಾಲೋಚನೆಗಳನ್ನು ನೀಡುವುದು. ಈ ಸೇವೆಗಳು ಉಚಿತವಾಗಿರುತ್ತವೆ.

ಈ ಸಮಾರಂಭದಲ್ಲಿ ಹಿರಿಯ ನಾಗರಿಕರಿಗಾಗಿ ಸರ್ಕಾರದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಕೈಪಿಡಿಯನ್ನು ಹಾಗೂ ಹಿರಿಯ ನಾಗರಿಕರಿಗಾಗಿ ಇರುವ ಕಾಯಿದೆಯ ಬಗ್ಗೆ ಕಿರು ಪುಸ್ತಕವನ್ನು ಹಿರಿಯ ನಾಗರಿಕರ / ಸಾರ್ವಜನಿಕರ / ಅಧಿಕಾರಿಗಳ ಉಪಯೋಗಕ್ಕಾಗಿ ಬಿಡುಗಡೆಗೊಳಿಸಲಾಗುವುದು ಎಂದು ಸಚಿವರು ತಿಳಿಸಿದರು.

ಪತ್ರಿಕಾ ಗೋಷ್ಠಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಉಮಾ ಮಹದೇವನ್, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ನಿರ್ದೇಶಕರಾದ ಡಾ. ವಿ. ಮುನಿರಾಜು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಅಕ್ಟೋಬರ್ 20 ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ):

ಸರ್ಕಾರದ ವತಿಯಿಂದ ರಾಜ್ಯ ಮಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅಕ್ಟೋಬರ್ 20ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಎಸ್ ಬೊಮ್ಮಾಯಿ ಅವರು ಮಾಡಲಿದ್ದಾರೆ. ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾದ ಬಿ.ಶ್ರೀರಾಮುಲು ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮಾನ್ಯ ಮಂತ್ರಿಗಳು, ಸಂಸದರು, ಶಾಸಕರು, ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯದ ಹಾಗೂ ನಗರದ ಎಲ್ಲಾ ಭಾಗಗಳಿಂದ ಆಗಮಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಛಾಯಾಚಿತ್ರ ಶೀರ್ಷಿಕೆ:**

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ):

ಬೆಂಗಳೂರು ಉತ್ತರ ವಲಯದ ಗೃಹರಕ್ಷಕ ದಳದ ಡೆಪ್ಯುಟಿ ಕಮಾಡೆಂಟ್‌ರಾದ ಕೃಷ್ಣ ಅವರು ದಿನಾಂಕ: 30–09–2021 ರಂದು ನಿವೃತ್ತಿ ಹೊಂದುತ್ತಿರುವುದರಿಂದ  ನಂದಿನಿ ಲೇಔಟ್‌ನ ಗೃಹ ರಕ್ಷಕ ಘಟಕ ವತಿಯಿಂದ ಬೀಳ್ಕೊಡಲಾಯಿತು.

## ಮಹಿಳಾ ದೌರ್ಜನ್ಯ ಪ್ರಕರಣಗಳಲ್ಲಿ ಆರೋಪಿಗಳಿಗೆ – ಪ್ರಕರಣದ ತೀವ್ರತೆಗೆ ಒಳಪಟ್ಟು ಶಿಕ್ಷೆ

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ):

ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಒಂದು ಶಾಸನಬದ್ಧ ಆಯೋಗವಾಗಿದ್ದು, ಸರ್ಕಾರ ಮತ್ತು ಯಾವುದೇ ರಾಜಕೀಯ ಪಕ್ಷದ ಪ್ರಬಾವ ಇಲ್ಲದೇ ಕಾರ್ಯನಿರ್ವಹಿಸುತ್ತಿದೆ. ರಾಜಕೀಯ ಕಾರಣಗಳಿಗಾಗಿ ಒಂದು ರಾಜಕೀಯ ಪಕ್ಷ ರಾಜ್ಯ ಮಹಿಳಾ ಆಯೋಗದ ಮೇಲೆ ಸುಳ್ಳು ಆರೋಪಗಳನ್ನು ಮಾಡಿ ಹಾಗೂ ಕಛೇರಿಗೆ ನುಗ್ಗಲು ಪ್ರಯತ್ನಿಸಿ ಆಯೋಗದ ಕಾರ್ಯನಿರ್ವಹಣೆಗೆ ಅಡ್ಡಿಪಡಿಸಿರುವುದು ವಿಷಾಧಕರ ಸಂಗತಿ. ಪತ್ರಿಕೆಗಳಲ್ಲಿ ವರದಿಯಾದಂತೆ ರಾಜ್ಯ ಮಹಿಳಾ ಆಯೋಗಕ್ಕೆ ಬೀಗ ಜಡಿಯಲಾಗಿದೆ ಎಂಬ ಅಂಶವು ಸತ್ಯಕ್ಕೆ ದೂರವಾಗಿರುತ್ತದೆ. ದಿನಾಂಕ: 28–09–2021ರಂದು ಆಯೋಗಕ್ಕೆ ಮಹಿಳೆಯರು ಭೇಟಿ ನೀಡಿ, ತಮ್ಮ ಸಮಸ್ಯೆ ಕುರಿತು ಅರ್ಜಿಗಳನ್ನು ನೀಡಿದ್ದು, ನಾನು ಅವರ ಸಮಸ್ಯೆಗಳ ಇತ್ಯರ್ಥಕ್ಕಾಗಿ ಸಂಬಂಧಪಟ್ಟ ಇಲಾಖೆಗಳಿಗೆ ಪತ್ರದ ಮುಖೇನ ಸೂಕ್ತ ರಕ್ಷಣೆ ಮತ್ತು ಕ್ರಮಕ್ಕೆ ನಿರ್ದೇಶಿಸಿರುತ್ತೇನೆ.

ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಆಯೋಗದ ಗಮನಕ್ಕೆ ಬಂದ ತಕ್ಷಣ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರನ್ನು ಭೇಟಿ ಮಾಡಿ, ಅವರಿಗೆ ಧೈರ್ಯ ತುಂಬುವ ಮತ್ತು ಸಾಂತ್ವಾನ ಹೇಳುವ ಕೆಲಸವನ್ನು ಆಯೋಗವು ಮೊದಲಿನಿಂದಲೂ ಮಾಡಿಕೊಂಡು ಬಂದಿರುತ್ತದೆ. ಇದರ ಜೊತೆಗೆ ಸಂಬಂಧಪಟ್ಟ ಇಲಾಖೆಗಳಿಗೆ ಸೂಚನೆ ಮತ್ತು ನಿರ್ದೇಶನಗಳನ್ನು ನೀಡಿ, ಆಯಾ ಸಂದರ್ಭಗಳಲ್ಲಿ ನೊಂದ ಮಹಿಳೆಯರಿಗೆ ಶಕ್ತಿ ತುಂಬುವ ಕೆಲಸವನ್ನು ಆಯೋಗ ಮಾಡಿಕೊಂಡು ಬಂದಿರುತ್ತದೆ. ಅನೇಕ ಪ್ರಕರಣಗಳಲ್ಲಿ ಸ್ವಯಂ ಪ್ರೇರಿತರಾಗಿ ದೂರುಗಳನ್ನು ದಾಖಲಿಸಿಕೊಂಡು ಮಹಿಳೆಯರಿಗೆ ನ್ಯಾಯ ಒದಗಿಸುವ ಕೆಲಸವನ್ನು ಪ್ರಥಮ ಆದ್ಯತೆಯ ಮೇರೆಗೆ ಮಾಡಲಾಗಿರುತ್ತದೆ. ರಾಜ್ಯ ಮಹಿಳಾ ಆಯೋಗವು ಸಮಾಜದ ಕಟ್ಟಕಡೆಯ ಮಹಿಳೆಗೂ ನ್ಯಾಯವನ್ನು ದೊರಕಿಸಿ ಕೊಡಲು ಕಟಿಬದ್ಧವಾಗಿದೆ. ರಾಜಕೀಯ ಕಾರಣಗಳಿಗಾಗಿ ಮತ್ತು ಪ್ರಚಾರದ ಕಾರಣಕ್ಕಾಗಿ ರಾಜಕೀಯ ಪಕ್ಷಗಳು ರಾಜ್ಯ ಮಹಿಳಾ ಆಯೋಗದ ಮೇಲೆ ಕೆಸರು ಎರಚುವ ಕೆಲಸವನ್ನು ಮಾಡಬಾರದು. ಯಾವುದೇ ನಿರ್ಧಿಷ್ಟ ಪ್ರಕರಣಗಳಲ್ಲಿ ಮಹಿಳೆಯರಿಗೆ ಅನ್ಯಾಯವಾಗಿದ್ದಲ್ಲಿ, ಆಯೋಗದ ಗಮನಕ್ಕೆ ತಂದರೆ ಕೂಡಲೇ ಅವರಿಗೆ ನ್ಯಾಯ ಕೊಡಿಸುವ ಕಾರ್ಯವನ್ನು ಮಾಡಲಾಗುವುದು.

ದಿನಾಂಕ: 28–09–2021ರಂದು ಮಂಗಳವಾರ ದಿನದಂದು ರಾಜಕೀಯ ಪಕ್ಷವೊಂದರ ಕಾರ್ಯಕರ್ತರು ಬಲವಂತವಾಗಿ ಮಹಿಳಾ ಆಯೋಗದ ಕಾರ್ಯಾಲಯಕ್ಕೆ ನುಗ್ಗಲು ಪ್ರಯತ್ನಿಸಿದ್ದು, ಪೊಲೀಸರ ಸಕಾಲಿಕ ಪ್ರವೇಶದಿಂದ ಅವರ ಬಲವಂತದ ಕಾನೂನು ಬಾಹಿರ ಪ್ರಯತ್ನವನ್ನು ತಡೆಯಲಾಗಿದೆ. ಅಲ್ಲದೇ ಇವರುಗಳು ಲಿಖಿತ ರೂಪದಲ್ಲಿ ಯಾವುದೇ Memorandum ನೀಡಿರುವುದಿಲ್ಲ. ಹಾಗೂ ಸ್ಪಷ್ಟವಾಗಿ ನಿರ್ಧಿಷ್ಟ ಸಮಸ್ಯೆಗಳ ಕುರಿತು ಮಾತನಾಡಿರುವುದಿಲ್ಲ.

ಮಹಿಳಾ ದೌರ್ಜನ್ಯ ಪ್ರಕರಣಗಳಲ್ಲಿ ಆರೋಪಿಗಳಿಗೆ ನ್ಯಾಯಾಂಗ ವ್ಯವಸ್ಥೆಯು ಪ್ರಕರಣದ ತೀವ್ರತೆಗೆ ಒಳಪಟ್ಟು ಶಿಕ್ಷೆ ನೀಡಬೇಕಾಗಿರುತ್ತದೆ. ಶಿಕ್ಷೆಗೆ ಒಳಪಡಿಸುವುದು ರಾಜ್ಯ ಮಹಿಳಾ ಆಯೋಗದ ಕಾರ್ಯ ವ್ಯಾಪ್ತಿಯಲ್ಲಿ ಇರುವುದಿಲ್ಲ. ರಾಜಕೀಯ ಪಕ್ಷಗಳು ರಾಜಕೀಯ ರಾಜಕೀಯ ಲಾಭಕ್ಕಾಗಿ ಮಹಿಳಾ ಆಯೋಗದ ಮೇಲೆ ಸುಳ್ಳು ಆರೋಪ ಮಾಡಬಾರದು ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯುತ್‌ಚಾಲಿತ ಬಸ್ ಉದ್ಘಾಟನೆ

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ):

ಬೆಂಗಳೂರಿನಲ್ಲಿ ದಿನೇ ದಿನೇ ವಾಯು ಮಾಲಿನ್ಯ ಹೆಚ್ಚಾಗುತ್ತಿದ್ದು, ಮಾಲಿನ್ಯ ನಿಯಂತ್ರಣವನ್ನು ಕಡಿಮೆ ಮಾಡುವ ಸಲುವಾಗಿ ಇಂದು ವಿದ್ಯುತ್ ಚಾಲಿತ ಬಸ್‌ನ್ನು ಬೆಂಗಳೂರು ನಗರದಲ್ಲಿ ಚಾಲನೆಗೊಳಿಸಲಾಗಿದೆ ಎಂದು ಸಾರಿಗೆ ಸಚಿವ ಬಿ. ಶ್ರೀರಾಮುಲು ತಿಳಿಸಿದರು.

ಇಂದು ಕೆಂಗೇರಿ ಬಿಎಂಟಿಸಿ ಘಟಕ 37ರಲ್ಲಿ ವಿದ್ಯುತ್‌ಚಾಲಿತ ಬಸ್‌ಗೆ ಚಾಲನೆ ನೀಡಿ ಮಾತನಾಡಿದ ಸಚಿವರು, ಬೆಂಗಳೂರು ಸ್ಮಾರ್ಟ್‌ಸಿಟಿ ಯೋಜನೆಯ ಮೆಟ್ರೋ ಫೀಡರ್ ಸೇವೆಗಾಗಿ ಹವಾನಿಯಂತ್ರಣ ರಹಿತ 90 ವಿದ್ಯುತ್ ಚಾಲಿತ (ಎಲೆಕ್ಟ್ರಿಕ್) ಬಸ್‌ಗಳನ್ನು ಒಟ್ಟು ವೆಚ್ಚದ ಆಧಾರದ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಸೇವಾ ಪೂರೈಕೆದಾರರಿಗೆ ಟೆಂಡರ್ ಆಹ್ವಾನಿಸಲಾಗಿತ್ತು.

ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ 90 ಎಲೆಕ್ಟ್ರಿಕ್ ಬಸ್ಸುಗಳ ಕಾಯಾಚರಣೆಗಾಗಿ ರೂ. 50 ಕೋಟಿ ಹಣಕಾಸಿನ ನೆರವು ನೀಡುತ್ತದೆ. ಪ್ರತಿ ಬಸ್‌ಗೆ ರೂ.50 ಲಕ್ಷಗಳ ಪ್ರೋತ್ಸಾಹಧನ (90 ಬಸ್ಸುಗಳಿಗೆ ರೂ 45 ಕೋಟಿ) ಬಿಡ್ಡರ್ ಒದಗಿಸಿ, ರೂ 5 ಕೋಟಿಯನ್ನು ಚಾರ್ಜಿಂಗ್ ಮೂಲಸೌಕರ್ಯ ಸ್ಥಾಪನೆಗೆ ಬಿಎಂಟಿಸಿ ಬಳಸುತ್ತದೆ. ಈ ಬಸ್ಸುಗಳು ಪ್ರತಿ ಕಿ.ಮೀಗೆ ರೂ. 51.65

ಒಟ್ಟು ಒಪ್ಪಂದದ ವೆಚ್ಚದೊಂದಿಗೆ ಸಂಚರಿಸುವುದು. 33 ಆಸನಗಳನ್ನು ಹೊಂದಿದ ಈ ಬಸ್ಸುಗಳು ಯಶವಂತಪುರ, ಕೆ.ಆರ್.ಪುರಂ, ಕೆಂಗೇರಿ ಡಿಪೋಗಳಿಂದ ಕಾರ್ಯನಿರ್ವಹಿಸಲಿದೆ. ಈ ಎಲೆಕ್ಟ್ರಿಕ್ ಬಸ್‌ಗಳಿಗೆ 45 ನಿಮಿಷಗಳು ಚಾರ್ಜ್ ಮಾಡಿದರೆ 120 ಕಿ.ಮೀ ಸಂಚರಿಸುವ ಸಾಮರ್ಥ್ಯ ಹೊಂದಿದೆ ಎಂದು ಸಚಿವರು ತಿಳಿಸಿದರು

ಈ ಸಂದರ್ಭದಲ್ಲಿ ಬಿಎಂಟಿಸಿ ಅಧ್ಯಕ್ಷ ನಂದೀಶ್‌ರೆಡ್ಡಿ, ಉಪಾಧ್ಯಕ್ಷ ವೆಂಕಟೇಶ್ ಸೇರಿದಂತೆ ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳು ಹಾಜರಿದ್ದರು.

## ಸರ್ಕಾರಿ ವೈಮಾನಿಕ ತರಬೇತಿ ಶಾಲೆಯನ್ನು ಉನ್ನತೀಕರಣಕ್ಕೆ ಕ್ರಮ

**– ಸಚಿವ ಕೆ.ಸಿ.ನಾರಾಯಣಗೌಡ**

**ಬೆಂಗಳೂರು, ಸೆಪ್ಟಂಬರ್ 30 (ಕರ್ನಾಟಕ ಸರ್ಕಾರ):**

ಕಳೆದ ಎರಡು ವರ್ಷಗಳಿಂದ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯನ್ನು ಉನ್ನತೀಕರಿಸಿ, ದೇಶದಲ್ಲೇ ಅತ್ಯುತ್ತಮ ಶಾಲೆಯನ್ನಾಗಿ ಮಾರ್ಪಡಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ಸಿ.ನಾರಾಯಣಗೌಡ ಅವರು ತಿಳಿಸಿದರು.

ಜಕ್ಕೂರು ಏರೋಡ್ರಮ್‌ನಲ್ಲಿ ರನ್ ವೇ ಕಾಮಗಾರಿ ಪರಿವೀಕ್ಷಣೆ ಮಾಡಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಚಿವರು Cessna-172S VT-MOM, Cessna-172P VT-EHA, Cessna-A152 VT-EIB ಮೂರು ವಿಮಾನಗಳನ್ನು ಡಿ.ಜಿ.ಸಿ.ಎ. ಯಿಂದ ಪರಿಶೀಲನೆಗೊಳಪಡಿಸಿ, ವೈಮಾನಿಕ ಹಾರಾಟ ದೃಢೀಕರಣ ಪಡೆಯಲಾಗಿದ್ದು, ಪರೀಕ್ಷಾರ್ಥ ಹಾರಾಟವನ್ನು ನಡೆಸಲಾಗಿರುತ್ತದೆ. Tecnam P2006T ಟ್ವಿನ್ ಇಂಜಿನ್ ವಿಮಾನವನ್ನು ಅಸೆಂಬಲ್ ಮಾಡಲಾಗಿದೆ ಎಂದು ಸಚಿವರು ತಿಳಿದರು.

ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಹ್ಯಾಂಗರ್‌ನ ನವೀಕರಣ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಜಕ್ಕೂರು ವಿಮಾನ ನಿಲ್ದಾಣದ ಆವರಣ ಮತ್ತು ಶಾಲೆಯನ್ನು ಉನ್ನತೀಕರಿಸಲು ಕ್ರಮಕೈಗೊಳ್ಳಲಾಗಿದೆ. ಜಕ್ಕೂರು ವಿಮಾನ ನಿಲ್ದಾಣದ ಭದ್ರತೆಯನ್ನು ಮೇಲ್ದರ್ಜೆಗೇರಿಸಲಾಗಿದೆ. ಸರ್ಕಾರಿ ವೈಮಾನಿಕ ಶಾಲೆಗೆ ಒಬ್ಬ ಮುಖ್ಯ ವಿಮಾನ ಬೊಧಕರು ಹಾಗೂ ಇಬ್ಬರು ಸಹಾಯಕ ವಿಮಾನ ಬೋಧಕರನ್ನು ನೇಮಕ ಮಾಡಲಾಗಿದೆ. ಸರ್ಕಾರಿ ವೈಮಾನಿಕ ತರಬೇತಿ ಶಾಲೆಗೆ ಮೂರು ಗ್ರೌಂಡ್ ಇನ್ಸ್‌ಟ್ರಕ್ಟರ್ ಹಾಗೂ ಇಬ್ಬರು ಸ್ಕಿಲ್ಡ್ ಮೆಕಾನಿಕ್‌ಗಳನ್ನು ನೇಮಕ ಮಾಡಲಾಗಿದೆ. ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ರನ್‌ವೇ, ಟ್ಯಾಕ್ಸಿವೇ ಮತ್ತು ಏಪ್ರಾನ್ ನವೀಕರಣ ಕಾಮಗಾರಿಯು ಪ್ರಗತಿಯಲ್ಲಿದೆ ಎಂದು ಸಚಿವರು ಹೇಳಿದರು.

ಸರ್ಕಾರಿ ವೈಮಾನಿಕ ತರಬೇತಿ ಶಾಲೆಯಲ್ಲಿ ನೊಂದಣಿಯಾಗಿದ್ದ 19 ಸಿಪಿಎಲ್ 15 ಪಿಪಿಎಲ್ ಸೇರಿ ಒಟ್ಟು 34 ವಿದ್ಯಾರ್ಥಿಗಳಿಗೆ ಅಕ್ಟೋಬರ್ ತಿಂಗಳಿನಿಂದ ತರಬೇತಿಯನ್ನು ಪ್ರಾರಂಭಿಸಲಾಗುವುದು. ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಸಿಪಿಎಲ್ ಶುಲ್ಕ ಕರ್ನಾಟಕ ಪ್ರಶಿಕ್ಷಣಾರ್ಥಿಗಳಿಗೆ ರೂ. 37,00,000/– ಹಾಗೂ ಕರ್ನಾಟಕೇತರ ಪ್ರಶಿಕ್ಷಣಾರ್ಥಿಗಳಿಗೆ ರೂ.42,00,000/–ಪಿಪಿಎಲ್ ತರಬೇತಿ ಶುಲ್ಕ ಕರ್ನಾಟಕ ಪ್ರಶಿಕ್ಷಣಾರ್ಥಿಗಳಿಗೆ ರೂ. 10,00,000/– ಕರ್ನಾಟಕೇತರ ಪ್ರಶಿಕ್ಷಣಾರ್ಥಿಗಳಿಗೆ 15,00,000/– ಶುಲ್ಕ ನಿಗದಿಪಡಿಸಿದೆ ಎಂದು ಸಚಿವರು ತಿಳಿಸಿದರು.

# 67ನೇ ವನ್ಯಜೀವಿ ಸಪ್ತಾಹ

ಬೆಂಗಳೂರು. ಸೆಪ್ಟೆಂಬರ್ 30, (ಕರ್ನಾಟಕ ವಾರ್ತೆ) :

ಕರ್ನಾಟಕ ಅರಣ್ಯ ಇಲಾಖೆಯು ವನ್ಯಜೀವಿ ಸಂರಕ್ಷಣೆಯ ಜಾಗೃತಿಯನ್ನು ಸಾರ್ವಜನಿಕರಿಗೆ ಮೂಡಿಸಲು ಪ್ರತಿವರ್ಷವೂ ಅಕ್ಟೋಬರ್ ಮೊದಲವಾರದಲ್ಲಿ ವನ್ಯಜೀವಿ ಸಪ್ತಾಹವನ್ನು ಆಚರಿಸುತ್ತಾ ಬಂದಿದೆ. ಪ್ರತಿ ವರ್ಷದಂತೆ ಈ ಬಾರಿಯೂ ಸಹ 2021ನೇ ಸಲ್ಲಿನಲ್ಲಿ 67ನೇ ವನ್ಯಜೀವಿ ಸಪ್ತಾಹವನ್ನು ದಿನಾಂಕ: 02–10–2021ರಿಂದ 08–10–2021ರ ವರೆಗೆ ಹಮ್ಮಿಕೊಳ್ಳಲಾಗಿದೆ.

ಅಪಾರ ವೃಕ್ಷ ಸಂಪತ್ತು ಹಾಗೂ ವನ್ಯ ಜೀವಿಗಳನ್ನು ಹೊಂದಿದ್ದ ಕರ್ನಾಟಕ ರಾಜ್ಯವು ಮನುಷ್ಯನ ದುರಾಸೆಗೆ ನಾಶವಾಗಿ ಕಾಂಕ್ರೀಟ್ ಮಯವಾಗುತ್ತಿದೆ. ವನ್ಯ ಪ್ರಾಣಿಗಳಿಗೆ ನೆಲೆಯಿಲ್ಲದಂತಾಗಿದೆ. ಇದರ ಪರಿಣಾಮ ಮಳೆ ಇಲ್ಲದೇ ಕೆರೆ ಕುಂಟೆಗಳು ಬತ್ತಿವೆ. ಅಂತರ್ಜಲ ಪಾತಾಳಕ್ಕೆ ಕುಸಿದಿದ್ದು, ಕಾಡು ಪ್ರಾಣಿಗಳು ನಾಡಿನತ್ತ ದಾವಿಸಿ ಮನುಷ್ಯರ ಜೊತೆ ಸಂಘರ್ಷಕ್ಕೆ ತೊಡಗಿವೆ.

ಇದು ಹೀಗೆ ಮುಂದುವರೆದರೆ ಮುಂಬರುವ ದಿನಗಳಲ್ಲಿ ಸ್ವಚ್ಛವಾದ ಗಾಳಿ ನೀರು ಆಹಾರ ಇಲ್ಲದೇ ಕಲುಷಿತ ಪರಿಸರ ಉಂಟಾಗಿ ಸರಿಪಡಿಸಲಾಗದ ಸ್ಥಿತಿಯನ್ನು ತಲುಪುತ್ತದೆ. ಇಂದು ಕರ್ನಾಟಕವು ರಾಷ್ಟ್ರದಲ್ಲಿಯೇ ಅತಿ ಹೆಚ್ಚು ಹುಲಿ, ಚಿರತೆ, ಆನೆ ಹಾಗೂ ಸಿಂಹಗಳ ತಾಣವಾಗಿದೆ, ಈ ಹೆಮ್ಮೆಯ ಕೊಡುಗೆಯನ್ನು ಕಾಯ್ದುಕೊಳ್ಳಣ. ಕರ್ನಾಟಕ ಅರಣ್ಯ ಇಲಾಖೆಯು ಪ್ರತಿ ವರ್ಷ ಅಕ್ಟೋಬರ್ ತಿಂಗಳ ಮೊದಲವಾರದಲ್ಲಿ ವನ್ಯಜೀವಿ ಸಪ್ತಾಹವನ್ನು ಆಚರಿಸಿಕೊಂಡು ಬಂದಿದೆ. 2021–22ನೇ ಸಾಲಿನಲ್ಲಿಯೂ ಸಹ ವನ್ಯಜೀವಿ ಸಪ್ತಾಹವನ್ನು ಹಮ್ಮಿಕೊಳ್ಳಲಾಗಿದೆ.

ಮಕ್ಕಳಲ್ಲಿ ಸಾರ್ವಜನಿಕರಲ್ಲಿ ಕಾಡನ್ನು ಬೆಳೆಸಲು ಮತ್ತು ವನ್ಯಜೀವಿ ಉಳಿಸಿ ಸಂರಕ್ಷಿಸುವ ನಿಟ್ಟಿನಲ್ಲಿ ಜಾಗೃತಿ ಉಂಟುಮಾಡಲು ಅರಣ್ಯ ಇಲಾಖೆಯು ಶಾಲಾ ಹಾಗೂ ಕಾಲೇಜು ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಹಾಗೂ ಪ್ರಬಂಧ ಸ್ಪರ್ಧೆಯನ್ನು ಆಯಾ ಶಾಲಾ ಕಾಲೇಜುಗಳಲ್ಲಿಯೇ ಹಮ್ಮಿಕೊಳ್ಳಲಾಗಿದೆ. ಸ್ಪರ್ಧೆಯಲ್ಲಿ ಗೆದ್ದವರಿಗೆ ಸಮಾರೋಪ ಸಮಾರಂಭದ ದಿನದಂದು ಬಹುಮಾನ ವಿತರಣೆ ಮಾಡಲಾಗುವುದು.

ಅಕ್ಟೋಬರ್ 02, 2021ರಂದು ಬೆಳಿಗ್ಗೆ 8.00 ಗಂಟೆಗೆ ವಿಂಟೇಜ್ ಕಾರ್ ಮತ್ತು ಬೈಕ್ ರ್‍ಯಾಲಿಯನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಹಾಗೂ ಅಂದು ಕಬ್ಬನ್ ಪಾರ್ಕ್‌ನಿಂದ Cyclothon ನ್ನು ಹಮ್ಮಿಕೊಂಡಿದ್ದು, ಕಾಡನ್ನು ಉಳಿಸಿ ವನ್ಯಜೀವಿಗಳ ಸಂರಕ್ಷಣೆ ಮಾಡೋಣ ಎಂಬ ವಿಷವನ್ನು ಜನರಿಗೆ ತಲುಪಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ವನ್ಯಜೀವಿ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ದಿನಾಂಕ: 08–10–2021ರಂದು ಹಮ್ಮಿಕೊಳ್ಳಲಾಗುವುದು ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪ್ರಚಾರ ಮತ್ತು ಐಸಿಟಿ) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ**

ಬೆಂಗಳೂರು, ಸೆಪ್ಟೆಂಬರ್ 30 (ಕರ್ನಾಟಕ ವಾರ್ತೆ):

**ದಿನಾಂಕ: 30.9.2021 (Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 39 | ಉತ್ತಮ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 34 | ಉತ್ತಮ | $O_3$ |
| 3 | ಕವಿಕ, ಮೈಸೂರುರಸ್ತೆ | 70 | ತೃಪ್ತಿಕರ | $PM_{10}$ |
| 4 | ರಾಜೀವ್‌ಗಾಂಧಿ ಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೇಗೌಡನಗರ | 33 | ಉತ್ತಮ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 93 | ತೃಪ್ತಿಕರ | $PM_{10}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 71 | ತೃಪ್ತಿಕರ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 46 | ಉತ್ತಮ | CO |
| **(30.9.2021 at 10.05 AM)** | | | | |

| | | | | |
|---|---|---|---|---|
| 8 | BWSSB,ಕಾಡಬೀಸನಹಳ್ಳಿ | 94 | ತೃಪ್ತಿಕರ | $SO_2$ |
| 9 | ಪೀಣ್ಯ | 60 | ತೃಪ್ತಿಕರ | $PM_{10}$ |
| 10 | ಬಿಟಿಎಂ ಲೇಔಟ್ | * | * | * |

| ವರ್ಗ(ಶ್ರೇಣಿ) | ಉಂಟಾಗಬಹುದಾದ ಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕ ಒಡ್ಡುವಿಕೆಯಿಂದ ಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕ ಒಡ್ಡುವಿಕೆಯಿಂದ ಜನರಿಗೆ ಶ್ವಾಸಕೋಶದ ಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತ ಜನರಿಗೂ ಉಸಿರಾಟದ ಅಸ್ವಸ್ಥತೆ |

## AQI of the CAAQM stations established in Bengaluru City

**Date : 30.9.2021 (Average of past 24 hours)**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 39 | Good | $PM_{10}$ |
| 2 | Jayanagar 5th Block, Shalini ground | 34 | Good | $O_3$ |
| 3 | KAVIKA, Mysore Road | 70 | Satisfactory | $PM_{10}$ |
| 4 | Rajeev Gandhi Institute of Chest Disease, NIMHANS, Hombegowda Nagar | 33 | Good | $PM_{10}$ |
| 5 | HSR Layout, near Central Silkboard | 93 | Satisfactory | $PM_{10}$ |
| 6 | City Railway Station, Magestic, Bengaluru | 71 | Satisfactory | $PM_{10}$ |
| 7 | Saneguruvanahalli, NisargaBhavan, KSPCB, Shivanagara | 46 | Good | CO |
| **(30.9.2021 at 10.05 AM)** | | | | |
| 8 | BWSSB, Kadabesanahalli | 94 | Satisfactory | $SO_2$ |
| 9 | Peenya | 60 | Satisfactory | $PM_{10}$ |

| | | | | |
|---|---|---|---|---|
| 10 | BTM Layout | * | * | * |

| Category (Range) | Possible Health Impacts | Category (Range) | Possible Health Impacts |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |